**<u>೨ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ ಪೀಠ ಬಸವಕಲ್ಯಾಣ</u>**

**S.C.No. 5021/2021**

**ಪೋಲಿಸ ಠಾಣೆ ಹಳ್ಳಿಖೇಡ ವಿರುದ್ಧ ಶಿವಶರಣಯ್ಯ ಮತ್ತು ಇನ್ನೊಬ್ಬ**

| | | |
|---|---|---|
| ಹೆಸರು | : | ರಾಯಪ್ಪಾ |
| ತಂದೆಯ ಹೆಸರು | : | ಬಸವಣಪ್ಪಾ ಘತ್ತೆಪೂರೆ |
| ವಯಸ್ಸು | : | 45 ವರ್ಷ. |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಮುಗನೂರ |

**ಚಾ.ಸಾ. 06**
**ಅ.ಸಾ. 09**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರವರಿಂದಃ-</u>**

ನನಗೆ ಆರೋಪಿತರು ಗೊತ್ತು. ನನಗೆ ಚಾ.ಸಾ. 7 ಗೊತ್ತು. 2021 ರಲ್ಲಿ ಹುಮನಾಬಾದನ ಅಂಬೇಡ್ಕರ ವೃತ್ತದ ಹತ್ತಿರ ಇರುವ ಹೋಟೆಲ್ ನಲ್ಲಿ ಇದ್ದಾಗ ಪೊಲೀಸರು ನನ್ನನ್ನು ಮತ್ತು ಚಾ.ಸಾ. 7 ರವರನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿಂದ ಪೊಲೀಸ ಜೀಪಿನಲ್ಲಿ ಕುಡಿಸಿಕೊಂಡು ಪಂಚನಾಮೆ ಸಲುವಾಗಿ ಹುಮನಾಬಾದನ ಸರ್ಕಾರಿ ವೈನಶಾಪ ಹತ್ತಿರ ಕರೆದುಕೊಂಡು ಹೋದರು. ಸದರಿ ಸ್ಥಳದಲ್ಲಿ ಪೊಲೀಸರು ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ಆಗ ಸಮಯ 12:30 ಗಂಟೆ ಆಗಿತ್ತು. ನಂತರ ಹುಡಗಿ ದಾಟಿದ ನಂತರ ನಂದಗಾಂವ ರಸ್ತೆಗೆ ಹೊಂದಿಕೊಂಡಿರುವ ಜಮೀನಿಗೆ ಕರೆದುಕೊಂಡು ಹೋಗಿ ಅಲ್ಲಿ ಸ್ಥಳ ಮಹಜರ್ ಮಾಡಿದರು. ಸ್ಥಳದಲ್ಲಿ ನೀರಿನ ಬಾಟಲ್, ಸರಾಯಿ ಬಾಟಲ್, ಒಂದು ಪೇಪರ್ ಪೊಲೀಸರು ತೆಗೆದುಕೊಂಡು

ಸ್ಥಳದಲ್ಲಿ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ನಂತರ ನಂದಗಾಂವನ ಒಂದು ಗುಡಿಯ ಹತ್ತಿರ ಕರೆದುಕೊಂಡು ಹೋದರು. ನಮ್ಮನ್ನು ಓಡಾಡಿಸಿ ನಂತರ ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಠಾಣೆಯಲ್ಲಿ ಪಂಚನಾಮೆಯನ್ನು ಬರೆದು ನಮ್ಮ ಸಹಿಯನ್ನು ಪಡೆದಿರುತ್ತಾರೆ. ಠಾಣೆಯಲ್ಲಿ ನಾನು 6 ಸಹಿಗಳು ಮಾಡಿರುತ್ತೇನೆ. ಸಾಕ್ಷಿ ಆರೋಪಿತರು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳದ ಪಂಚನಾಮೆ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಶಾನೆ ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಒಟ್ಟು 6 ಫೋಟೋಗಳನ್ನು ಮತ್ತು ಅದರಲ್ಲಿರುವ ತನ್ನ, ಆರೋಪಿತರ, ಪೊಲೀಸರ ಮತ್ತು ಚಾ.ಸಾ. 7 ರವರ ಭಾವಚಿತ್ರ ನೋಡಿ ಗುರುತಿಸಿದ್ದು, ಒಟ್ಟು 6 ಫೋಟೋಗಳನ್ನು ಒಟ್ಟಾಗಿ ನಿಶಾನೆ ಪಿ. 9 ಎಂದು ಗುರುತಿಸಲಾಯಿತು. ಸಾಕ್ಷಿ ಒಟ್ಟು 3 ಫೋಟೋಗಳನ್ನು ಮತ್ತು ಅದರಲ್ಲಿರುವ ತನ್ನ, ಆರೋಪಿತರ, ಪೊಲೀಸರ ಮತ್ತು ಚಾ.ಸಾ. 7 ರವರ ಭಾವಚಿತ್ರ ನೋಡಿ ಗುರುತಿಸಿದ್ದು, ಒಟ್ಟು 3 ಫೋಟೋಗಳನ್ನು ಒಟ್ಟಾಗಿ ನಿಶಾನೆ ಪಿ. 10 ಎಂದು ಗುರುತಿಸಲಾಯಿತು. ಸಾಕ್ಷಿ ಧುಮಾಳೆ ಅಂಗಡಿಯಲ್ಲಿ ನೀರಿನ ಬಾಟಲ್, ಗ್ಲಾಸ್ ಖರೀದಿ ಮಾಡಿದ ಕುರಿತು ತೆಗೆದ ಭಾವಚಿತ್ರಗಳನ್ನು ಮತ್ತು ಅದರಲ್ಲಿರುವ ತನ್ನ, ಚಾ.ಸಾ. 7, ಆರೋಪಿತರು ಮತ್ತು ಪೊಲೀಸರ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು 2 ಫೋಟೋಗಳನ್ನು ಒಟ್ಟಾಗಿ ನಿಶಾನೆ ಪಿ. 11 ಎಂದು ಗುರುತಿಸಲಾಯಿತು. ಸಾಕ್ಷಿ ಹುಡುಗಿ ದಾಟಿದ ನಂತರ ನಂದಗಾಂವ ರಸ್ತೆಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಪಂಚನಾಮೆ ಮಾಡುವಾಗ ತೆಗೆದ ಭಾವಚಿತ್ರಗಳನ್ನು ಮತ್ತು ಅವುಗಳಲ್ಲಿರುವ ತನ್ನ, ಆರೋಪಿತರ, ಚಾ.ಸಾ. 7 ಮತ್ತು ಪೊಲೀಸರ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, 8 ಭಾವಚಿತ್ರಗಳನ್ನು ಒಟ್ಟಾಗಿ ನಿಶಾನೆ

ಪಿ. 12 ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಸ್ಥಳದಲ್ಲಿನ ಪೇಪರ್ ಜಪ್ತಿಪಡಿಸಿಕೊಳ್ಳುವಾಗ ತೆಗೆದ 2 ಭಾವಚಿತ್ರಗಳನ್ನು ಮತ್ತು ಅವುಗಳಲ್ಲಿನ ತನ್ನ ಚಾ.ಸಾ. 7, ಆರೋಪಿತರು ಮತ್ತು ಪೊಲೀಸರ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ. 13 ಎಂದು ಗುರುತಿಸಲಾಯಿತು.

ಸಾಕ್ಷಿ ಮುದ್ದೆ ಮಾಲು 7 ನೀರಿನ ಬಾಟಲ್, ಮುದ್ದೆ ಮಾಲು 8 ಸರಾಯಿ ಪಾಕೇಟ್, ಮುದ್ದೆ ಮಾಲು 18 ನಾಲ್ಕು ಪ್ಲಾಸ್ಟಿಕ ಗ್ಲಾಸಗಳು, ಮುದ್ದೆ ಮಾಲು 4 ಮಿನಿ ಕ್ಯಾಲೆಂಡರ್ ನೋಡಿ ಗುರುತಿಸಿರುತ್ತಾರೆ. ಇಷ್ಟನ್ನು ಹೊರತುಪಡಿಸಿ ಹೆಚ್ಚಿನ ವಿಷಯ ಗೊತ್ತಿಲ್ಲಾ.

***ಈ ಹಂತದಲ್ಲಿ ಸಾಕ್ಷಿಯನ್ನು ಭಾಗಸಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಲು ಮಾನ್ಯ ಪಿ.ಪಿ., ರವರು ಅನುಮತಿ ಕೋರಿರುತ್ತಾರೆ, ಆ ಪ್ರಕಾರ ಅನುಮತಿ ನೀಡಲಾಯಿತು.***

## ಪಾಟಿ ಸವಾಲು - ಸರಕಾರಿ ಅಭಿಯೋಜಕರವರಿಂದಃ-

ನನ್ನನ್ನು ಮತ್ತು ಚಾ.ಸಾ. 7 ರವರನ್ನು ಪೊಲೀಸರು ಠಾಣೆಗೆ ಕರೆದಾಗ ಠಾಣೆಯಲ್ಲಿ ಆರೋಪಿತರು ಇದ್ದು, ಕೊಲೆ ಮಾಡಿದ ಸ್ಥಳ ಮತ್ತು ಹೊಂಚು ಹಾಕಿದ ಸ್ಥಳ, ಸರಾಯಿ ಖರೀದಿಸಿದ ಸ್ಥಳ, ಕೃತ್ಯಕ್ಕೆ ಉಪಯೋಗಿಸಿದ ವಾಹನ ಮತ್ತು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ತೋರಿಸಿದ ಹಾಜರುಪಡಿಸಿರುತ್ತೇವೆ ಎಂದು ನಮ್ಮ ಸಮಕ್ಷಮ ಪೊಲೀಸರಿಗೆ ಆರೋಪಿತರು ಹೇಳಿದರು ಎಂದರೆ ಸರಿ ಅಲ್ಲಾ. ಆರೋಪಿತರು ನಂದಗಾಂವ ದೇವಸ್ಥಾನದ ಹತ್ತಿರದಿಂದ ಮೃತನನ್ನು ಕರೆದುಕೊಂಡು ಹೋಗಿರುತ್ತೇವೆ ಎಂದು ಸ್ಥಳ ತೋರಿಸಿದರು ಎಂದರೆ ಸರಿ ಅಲ್ಲಾ. ನಿಶಾನೆ ಪಿ. 8 ಪಂಚನಾಮೆಯನ್ನು ಬೆಳಿಗ್ಗೆ 10:30 ರಿಂದ ಮಧ್ಯಾಹ್ನ 1:00 ಗಂಟೆಯ ವರೆಗೆ ಠಾಣೆಯಿಂದ ಬರೆಯಲು ಪ್ರಾರಂಭಿಸಿ ಮಧ್ಯಾಹ್ನ 1:00

ಗಂಟೆಗೆ ಹುಮನಾಬಾದನ ಸರ್ಕಾರಿ ಸರಾಯಿ ಅಂಗಡಿಯ ಮುಂದೆ ಬರೆಯಲು ಮುಕ್ತಾಯಗೋಳಿಸಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಂತರ ಆರೋಪಿತರು ಮಧ್ಯಾಹ್ನ 1:15 ಗಂಟೆಗೆ ಮೃತನಿಗೆ ಬೆಲ್ಟಿನಿಂದ ಹೊಡೆದು ಕೊಲೆ ಮಾಡಿದ ಸ್ಥಳ ತೋರಿಸುತ್ತೇವೆ ಎಂದು ನಮ್ಮನ್ನು ಕರೆದುಕೊಂಡು ಹೋದರು ಎಂದರೆ ಸಾಕ್ಷಿ ನಮ್ಮ ಮುಂದೆ ಆರೋಪಿತರು ಯಾವುದೇ ವಿಷಯ ತಿಳಿಸಿಲ್ಲಾ ಎಂದು ನುಡಿಯುತ್ತಾರೆ. ನಂದಗಾಂವ ರಸ್ತೆಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಕೊಲೆ ಮಾಡಿದ ಸ್ಥಳದ ಪಂಚನಾಮೆ ಮತ್ತು ಶವವನ್ನು ಬೀಸಾಕಿದ ಸ್ಥಳದ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3:30 ಗಂಟೆಯ ವರೆಗೆ ಬರೆದಿರುತ್ತಾರೆ ಎಂದರೆ ಸರಿ. ಪಂಚನಾಮೆಯ ಮೇಲೆ ಹೊಲದಲ್ಲಿಯೇ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಕೊಲೆ ಮಾಡಿದ ಸ್ಥಳದ ಪಂಚನಾಮೆ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಶಾನೆ ಪಿ. 14 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 14(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರು ನಮಗೂ ಮತ್ತು ಪೊಲೀಸರಿಗೆ ಮೃತನ ಕಾರ್ಡುಗಳನ್ನು ಬೀಸಾಕಿದ ಸ್ಥಳ ತೋರಿಸುವುದಾಗಿ ಹೇಳಿ ಎನ್.ಹೆಚ್. 65 ರಸ್ತೆಯ ಮೇಲಿರುವ ಆರ್.ಟಿ.ಓ. ಚೆಕಪೋಸ್ಟ ಹತ್ತಿರ ಇರುವ ಬ್ರೀಜಿನ ಹತ್ತಿರ ಕರೆದುಕೊಂಡು ಹೋಗಿ ಸದರಿ ಬ್ರಿಜನಿಂದ ಹರಿಯುವ ನೀರಿನಲ್ಲಿ ಮೃತನ ಆಧಾರ ಕಾರ್ಡ, ಓಟರ್ ಐಡಿಗಳನ್ನು ಬೀಸಾಕಿರುತ್ತೇವೆ ಅಂತಾ ತಿಳಿಸಿದರು. ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಮೋಳಕೇರಾ ಗ್ರಾಮಕ್ಕೆ ಕರೆದುಕೊಂಡು ಹೋಗಿ 1 ನೇ ಆರೋಪಿತನ ಮನೆಯ ಮುಂದೆ ದ್ವಿಚಕ್ರ ವಾಹನ ಸಂ KA 39 L 1940 ನಿಲ್ಲಿಸಿಲಾಗಿತ್ತು ಮತ್ತು 1 ನೇ ಆರೋಪಿ ಮನೆಯ ಒಳಗಡೆ ಹೋಗಿ ಕೃತ್ಯದ ದಿನ

ತಾನು ಧರಿಸಿದ ಒಂದು ಕಪ್ಪು ಬಣ್ಣದ ಜಾಕೇಟ್, ಒಂದು ಬಿಳಿ ನೀಲಿ ಚೌಕಡಿಯುಳ್ಳ ಫುಲ್ ಶರ್ಟ, ಒಂದು ನೀಲಿ ಕಂದು ಬಣ್ಣದ ಪ್ಯಾಂಟ್, ಮೂರು ತೊಳೆದ ಬಟ್ಟೆಗಳನ್ನು ಹಾಜರುಪಡಿಸಿದ್ದು, ವಾಹನ ಮತ್ತು ಬಟ್ಟೆಗಳನ್ನು ಜಪ್ತಿಪಡಿಸಿಕೊಂಡಿದ್ದು ಮತ್ತು 2 ನೇ ಆರೋಪಿ ಮನೆಯಿಂದ ಕೃತ್ಯದ ದಿನ ತಾನು ಧರಿಸಿದ ಒಂದು ಕಂದು ಬಣ್ಣದ ಹಳದಿ ಟಿ-ಶರ್ಟ, ಒಂದು ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ತೊಳೆದಂತಹ ಬಟ್ಟೆಗಳು ಹಾಜರುಪಡಿಸಿದ್ದು ಚಾ.ಸಾ. 50 ರವರು ಜಪ್ತಿಪಡಿಸಿಕೊಂಡು ಸ್ಥಳದಲ್ಲಿಯೇ ಮಧ್ಯಾಹ್ನ 3:45 ರಿಂದ ಸಂಜೆ 6:00 ಗಂಟೆಯ ವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಶಾನೆ ಪಿ. 15 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ. 15(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ. 15 ರ ಸಮಯದಲ್ಲಿ ತೆಗೆದ 4 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಒಟ್ಟಾಗಿ ನಿಶಾನೆ ಪಿ. 16 ಎಂದು ಗುರುತಿಸಲಾಯಿತು. ಸಾಕ್ಷಿ ನಿಶಾನೆ ಪಿ. 7 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ

**<u>ಪಾಟಿ ಸವಾಲು - ಶ್ರೀ ಎಸ್.ಕೆ.ಆರ್., ವಕೀಲರಿಂದ ಆರೋಪಿತರ ಪರವಾಗಿ :-</u>**

ನಮ್ಮ ಗ್ರಾಮ ಹಳ್ಳಿಖೇಡ ಪೊಲೀಸ ಠಾಣೆಯ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನಮ್ಮ ಗ್ರಾಮದಲ್ಲಿ ಜಗಳಗಳಾದಲ್ಲಿ ಹಳ್ಳಿಖೇಡ ಪೊಲೀಸ ಠಾಣೆಯಲ್ಲಿ ನಾನು ಇತ್ಯರ್ಥ ಮಾಡಿ ಕರೆದುಕೊಂಡು ಬರುತ್ತೇನೆ ಎಂದರೆ ಸರಿ ಅಲ್ಲಾ. ನನಗೆ ಆ ಸಮಯದಲ್ಲಿ ಹಳ್ಳಿಖೇಡ ಪೊಲೀಸರು ಪರಿಚಯವಿದ್ದರು ಎಂದರೆ ಸರಿ ಅಲ್ಲಾ. ಶರಣಪ್ಪಾ ಪೊಲೀಸರು ನಮ್ಮ ಗ್ರಾಮಕ್ಕೆ ಆಗಾಗ ಬರುತ್ತಿದ್ದರು ಮತ್ತು ನನಗೆ ಪರಿಚಯವಿದ್ದರಿಂದ ನಮ್ಮನ್ನು ಕರೆದಿರುತ್ತಾರೆ. ಘಟನೆಯ

ಪೂರ್ವದಲ್ಲಿ 2-3 ಸಾರಿ ಶರಣಪ್ಪ ಪೊಲೀಸರು ನನ್ನನ್ನು ಭೇಟಿಯಾಗಿದ್ದರು. ಹಳೆಯ ಆರ್.ಟಿ.ಓ. ಕಛೇರಿಯ ಹತ್ತಿರ ಇರುವ ಬ್ರಿಜ್ ಹತ್ತಿರದ ಚೆಕ್ಕು ಬಂದಿ ನನಗೆ ಹೇಳಲು ಬರುತ್ತದೆ. ಆರೋಪಿಯ ಮನೆಯ ಚೆಕ್ಕು ಬಂದಿ ಹೇಳಲು ಬರುವುದಿಲ್ಲಾ. ಹುಡುಗಿಯಿಂದ ನಂದಗಾಂವಕ್ಕೆ ಹೋಗುವಾಗ ಎಡಗಡೆ ರಸ್ತೆಯಲ್ಲಿ ನೀರಿನ ಬಾಟಲ್ ಮತ್ತು ಸರಾಯಿ ಬಾಟಲ್ ಮತ್ತು ಪ್ಲಾಸ್ಟಿಕ ಗ್ಲಾಸುಗಳು ಸಿಕ್ಕಿದವು. ಪೊಲೀಸ ಠಾಣೆಯಲ್ಲಿ ದ್ವಿಚಕ್ರ ವಾಹನ ಮತ್ತು ಇತರೇ ವಸ್ತುಗಳನ್ನು ತೋರಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿ ಅಲ್ಲಾ. ನಿಶಾನೆ ಪಿ. 9 ಮತ್ತು 16 ಫೋಟೋಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿ ಅಲ್ಲಾ. ಆರೋಪಿತರು ಬಟ್ಟೆಗಳನ್ನು ಹಾಜರುಪಡಿಸಿಲ್ಲಾ ಮತ್ತು ದ್ವಿಚಕ್ರ ವಾಹನಗಳನ್ನು ಹಾಜರುಪಡಿಸಿಲ್ಲಾ ಎಂದರೆ ಸರಿ ಅಲ್ಲಾ. ಪೊಲೀಸ ಠಾಣೆಯಲ್ಲಿಯೇ ತೋರಿಸಿರುತ್ತಾರೆ. ನಾನು ಸರ್ಕಾರಿ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಮತ್ತು ಸಲಹೆಗಳಿಗೆ ಒಪ್ಪಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿ ಅಲ್ಲಾ. ಪಂಚನಾಮೆಯನ್ನು ಬರೆಯಲು ನಾನು ಪೊಲೀಸರಿಗೆ ಹೇಳಿಲ್ಲಾ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಮುದ್ದೆ ಮಾಲು 7, 8, 4 ಮತ್ತು 18 ಸ್ಥಳದಲ್ಲಿ ಸಿಕ್ಕಿಲ್ಲಾ ಎಂದರೆ ಸರಿ ಅಲ್ಲಾ. ಜಪ್ತಿಪಡಿಸಿಕೊಂಡ ಮುದ್ದೆ ಮಾಲುಗಳ ಮೇಲೆ ನಮ್ಮ ಸಹಿವುಳ್ಳ ಚೀಟಿ ಅಂಟಿಸಿಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ.